
# ಬ್ರಿಟನ್ ಪ್ರಧಾನಿಯ ಸಿನಿಮಾ ಪ್ರೀತಿ



ಅಕ್ಟೋಬರ್ 8ರಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ಮುಂಬೈನ ಅಂಧೇರಿಯಲ್ಲಿರುವ ಯಶ್ ರಾಜ್ ಫಿಲ್ಮ್ಸ್ ಸಂಸ್ಥೆಗೆ ದೊಡ್ಡ ನಿಯೋಗದೊಂದಿಗೆ ಭೇಟಿ ನೀಡಿದರು. ಭಾರಿ ಪೊಲೀಸ್ ಬಂದೋಬಸ್ತ್ ನಡುವೆ ಸಾಗಿದ ಅವರ ಪಯಣ, ಮುಂದೆ ನಟಿ ರಾಣಿ ಮುಖರ್ಜಿ ಅವರನ್ನು ಭೇಟಿಯಾಗುವವರೆಗೆ ಮುಂದುವರಿಯಿತು. ಸ್ಟಾರ್ಮರ್ ಹಾಗೂ ರಾಣಿ ಮುಖರ್ಜಿ ಇಬ್ಬರ ಫೋಟೊ ಒಂದೇ ಫ್ರೇಮ್‌ನಲ್ಲಿ.

ಇದಷ್ಟೇ ವಿಷಯ ಅಲ್ಲ. ಸ್ಟಾರ್ಮರ್ ಜೊತೆ ಇದ್ದವರು ಬ್ರಿಟಿಷ್ ಫಿಲ್ಮ್ ಕಮಿಷನ್, ಪೈನ್ವುಡ್ ಸ್ಟುಡಿಯೋಸ್, ಎಲ್‌ಸ್ಟ್ರೀ ಸ್ಟುಡಿಯೋಸ್, ಸಿವಿಕ್ ಸ್ಟುಡಿಯೋಸ್ ತರಹದ ಸಂಸ್ಥೆಗಳಿಂದ ಬಂದವರಾಗಿದ್ದರು. ಬ್ರಿಟನ್‌ನಲ್ಲಿ ಭಾರತದ ಸಿನಿಮಾಗಳು ಚಿತ್ರೀಕರಣ ನಡೆಸುವಂತೆ ಆಹ್ವಾನ ನೀಡುವ, ಒಪ್ಪಂದ ಮಾಡಿಕೊಳ್ಳುವ ಉದ್ದೇಶದ ಭೇಟಿ ಅದಾಗಿತ್ತು. ಮುಂದಿನ ಕೆಲವು ವರ್ಷಗಳಲ್ಲಿ ಯಶ್ ರಾಜ್ ಬ್ಯಾನರ್‌ನ ಕೆಲವು ಸಿನಿಮಾಗಳು ಬ್ರಿಟನ್ ಸ್ಟುಡಿಯೊಗಳಲ್ಲಿ ತಯಾರಾಗುವುದಂತೂ ನಿಕ್ಕಿಯಾಗಿದೆ. ಭಾರತದ ಸಿನಿಮಾ ಮಾರುಕಟ್ಟೆಯ ವ್ಯಾಪಕತೆ ಎಷ್ಟೆನ್ನುವುದಕ್ಕೆ ಈ ಬೆಳವಣಿಗೆ ಕನ್ನಡಿಯನ್ನೂ ಹಿಡಿದಿದೆ. ■

# ಲಾಲ್ ಕಮಾಲ್

ಒಂದು... ಅಭಿನಯವನ್ನು ನದಿಗೆ ಹೋಲಿಸಿದರೆ, ನಾನು ಮರವೊಂದರಿಂದ ಅದರ ಮೇಲೆ ಬಿದ್ದ ಸಣ್ಣ ಎಲೆಯಷ್ಟೆ. ಹರಿವಿನಲ್ಲಿ ಸುಳಿ ಇತ್ತು, ಎದುರು ಅಲೆ ಬಂದು ಅಪ್ಪಳಿಸಿದ್ದೂ ಉಂಟು. ಆಗೆಲ್ಲ ಎಲೆ ಮುಳುಗದ ಹಾಗೆ ನೋಡಿಕೊಂಡವರು ಅದೆಷ್ಟು ಜನ. ಮೇಕಪ್ ಮ್ಯಾನ್, ಸಿನಿಮಾಟೋಗ್ರಾಫರ್, ಕಥೆ ಬರೆದವರು, ಸಂಭಾಷಣೆ ಬರೆದವರು, ನಿರ್ದೇಶಕರು, ನಿರ್ಮಾಪಕರು, ಸ್ವರ ಸಂಯೋಜಕರು... ಎಲ್ಲರಿಗಿಂತ ಮಿಗಿಲಾಗಿ ಮಾಡಿದ ಪಾತ್ರಗಳನ್ನೆಲ್ಲ ನೋಡಿದ ಪ್ರೇಕ್ಷಕರು.

ಎರಡು... ಸ್ನೇಹಿತರ ಜೊತೆ ಮದ್ರಾಸ್ ತಲುಪಿ, ಸ್ಟುಡಿಯೊಗಳಿಗೆ ಎಡತಾಕಿದೆವು. ಒಬ್ಬರಿಗೂ ಸಿನಿಮಾ ಗಂಧ ಗಾಳಿ ಇರಲಿಲ್ಲ. ಸ್ನೇಹಿತರೇ ಒಂದು ಫೋಟೊ ಕ್ಲಿಕ್ ಮಾಡಿ ಫಾಜಿಲ್ ಅವರಿಗೆ ಕಳುಹಿಸಿದರು. 'ಮಂಜಿಲ್ ವಿರಿಂಜ ಪೂಕ್ಕಳ್' ಮಲೆಯಾಳಂ ಸಿನಿಮಾದಲ್ಲಿ ನರೇಂದ್ರನ್ ಎಂಬ ಪ್ರತಿನಾಯಕನ ಪಾತ್ರ ದಕ್ಕಿದ್ದು ಫಾಜಿಲ್ ಅವಕಾಶ ಕೊಟ್ಟಿದ್ದರಿಂದ. ಅಭಿನಯದ ಅವಕಾಶ ಒಲಿದುಬಂದ ಆ ಗಳಿಗೆ ನೀಡಿದ್ದು ಮಗುವಿನಂತಹ ಸುಖ. ಅದಾಗಿ 48 ವರ್ಷಗಳೇ ಉರುಳಿವೆ.

ಈ ಎರಡೂ ಅನುಭವಗಳನ್ನು ನಟ ಮೋಹನ್ ಲಾಲ್ ಸಣ್ಣಕಥೆಗಳಂತೆ ಮೊನ್ನೆಯಷ್ಟೇ ಹೇಳಿದರು. ಅವರಿಗೆ ದಾದಾ ಸಾಹೇಬ್ ಫಾಲ್ಕೆ ಗೌರವ ಸಂದ ಮೇಲೆ ಬಿಡುವಿಲ್ಲದಷ್ಟು ಸಮಾರಂಭಗಳು. ಕೇರಳ ಸರ್ಕಾರವೇ ಒಂದು ಅದ್ದೂರಿ ಅಭಿನಂದನಾ ಕಾರ್ಯಕ್ರಮ ಆಯೋಜಿಸಿ, ಅವರನ್ನು ಸನ್ಮಾನಿಸಿತು. ಆ ಸಮಾರಂಭದಲ್ಲಿ ಅಡೂರು ಗೋಪಾಲಕೃಷ್ಣನ್ ಮಾತಿನ ಸೂಜಿಮೊನೆಯೊಂದನ್ನು ತಾಕಿಸಿದರು. ಎರಡು ದಶಕಗಳ ಹಿಂದೆ ತಮಗೆ ದಾದಾ ಸಾಹೇಬ್ ಫಾಲ್ಕೆ ಸಿಕ್ಕಿದಾಗ ಸಮಾರಂಭ ಮಾಡುವ ಯೋಚನೆಯನ್ನು ಯಾರೂ ಮಾಡಿರಲಿಲ್ಲ ಎನ್ನುತ್ತಲೇ ಮೋಹನ್ ಲಾಲ್ ಅವರ ಕುರಿತು ಮೆಚ್ಚುಗೆಯ ಮಾತಾಡಿದರು.

ಆಮೇಲೆ ಮೋಹನ್ ಲಾಲ್ ತಮ್ಮ ಚಿತ್ರಬದುಕಿನ ಪಯಣವನ್ನು ರೂಪಕಗಳ ಮೂಲಕ ಬಣ್ಣಿಸಿದರು. ಆಗ ಹೊರಹೊಮ್ಮಿದ್ದೇ ಮೇಲೆ ಬರೆದಿರುವ ಎರಡು ಅತಿ ಸಣ್ಣ ಕಥೆಗಳು. ಅಡೂರು ಅವರು ಈಗಲಾದರೂ ಮೆಚ್ಚಿಕೊಂಡರಲ್ಲ ಎಂಬ ಧನ್ಯತಾಭಾವವನ್ನೂ ಮೋಹನ್ ಲಾಲ್ ಆರೋಗ್ಯಕರ ವ್ಯಂಗ್ಯದ ಶೈಲಿಯಲ್ಲಿ ಹೇಳಿದರು. ಆಗ ಚಪ್ಪಾಳೆ ಸದ್ದು ಜೋರಾಗಿ ಕೇಳಿತು.

ಸುಮಾರು 360 ಸಿನಿಮಾಗಳಲ್ಲಿ ಲಾಲ್ ಇದುವರೆಗೆ ಅಭಿನಯಿಸಿದ್ದಾರೆ. 1986ರಲ್ಲಿ ಅವರ ಅಭಿನಯದ 35 ಸಿನಿಮಾಗಳು ತೆರೆಕಂಡಿದ್ದವು. ಅದಕ್ಕೂ ಮೊದಲಿನ ಮೂರು ವರ್ಷ 25ಕ್ಕೆ ಕಡಿಮೆ ಚಿತ್ರಗಳು ಬಿಡುಗಡೆಯಾಗದೆ ಇರಲಿಲ್ಲ. ಎಲ್ಲವೂ ಅವರ ನಟನೆಯ ಸಿನಿಮಾಗಳೇ. ಅವರು ಅದಿನ್ನಾವ ಮಟ್ಟಿಗೆ ವರ್ಕೊಹಾಲಿಕ್ ಆಗಿದ್ದರು ಎನ್ನುವುದನ್ನು ಈ ಸಂಖ್ಯೆ ಹೇಳುತ್ತದೆ. ಕಮರ್ಷಿಯಲ್, ಪರ್ಯಾಯ, ಪ್ರಯೋಗಮುಖಿ ಎಲ್ಲ ಸಿನಿಮಾಗಳಲ್ಲಿಯೂ ಲಾಲ್ ಛಾಪು ಉಳಿದಿದೆ.

ತಮ್ಮ 18ರ ಪ್ರಾಯದಲ್ಲಿ ಅಭಿನಯಿಸಿದ್ದ 'ತಿರನೋಟ್ಟಂ' ಎಂಬ ಮಲೆಯಾಳಂ ಚಿತ್ರವು ತೆರೆಕಂಡಿದ್ದು 25 ವರ್ಷಗಳ ನಂತರ. ಅದೇ ಮೊದಲ ಸಿನಿಮಾ ಆಗಬೇಕಿತ್ತು. ಆಗ ಆದ ಕಹಿ ಅನುಭವ ದಾಟಿಯೇ ಲಾಲ್ ಕಾಡುವ ಅಸಂಖ್ಯ ಸಿನಿಮಾಗಳಲ್ಲಿ ಬಣ್ಣ ಹಚ್ಚಿದರು. ಕಿರೀಟಂ, ಭರತಂ, ವಾನಪ್ರಸ್ಥಮ್, ಜನತಾ ಗ್ಯಾರೇಜ್, ಪುಲಿಮುರುಗನ್, ದೃಶ್ಯಂ... ಲಾಲ್ ವೈವಿಧ್ಯ ಹಾಗೂ ಪ್ರಯೋಗಗಳಿಗೆ ಈ ಸಿನಿಮಾಗಳು ಕೆಲವು ಉದಾಹರಣೆಗಳಷ್ಟೆ. ■

